ಪೂರಕವಾದ ಕಲಿಕಾ ಸಾಮಗ್ರಿಗಳಿರುವ ಈ ವೆಬ್ ಪೋರ್ಟಲ್ (getcetgo.in) ಮತ್ತು ಆ್ಯಂಡ್ರಾಯ್ಡ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಿವೆ. ಕ್ರ್ಯಾಶ್ ಕೋರ್ಸ್‌ನಲ್ಲಿ ಪಠ್ಯಗಳ ಸಾರಾಂಶಗಳು, ಅಭ್ಯಾಸ ಪ್ರಶ್ನೆಗಳು, ಪ್ರತಿ ಅಧ್ಯಾಯದ ಪರೀಕ್ಷೆಗಳು, ಅಣಕು ಪರೀಕ್ಷೆಗಳು ಹಾಗೂ ಬೋಧನಾ ವಿಡಿಯೊಗಳಿವೆ. ಇವುಗಳು ಆನ್‌ಲೈನ್ ಶಿಕ್ಷಣದತ್ತ ಸರ್ಕಾರ ಈಗೀಗ ಇಟ್ಟಿರುವ ಎರಡು ಪುಟ್ಟ ಹೆಜ್ಜೆಗಳಷ್ಟೆ.

## 20 ಸಾವಿರ ಕೋಟಿ ಉದ್ಯಮ

ಭಾರತದಲ್ಲಿ ಆನ್‌ಲೈನ್ ಶಿಕ್ಷಣವು ಇತ್ತೀಚೆಗೆ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಕಳೆದ ನಾಲ್ಕೈದು ವರ್ಷಗಳಿಂದ ಶೇ. 52ರ ದರದಲ್ಲಿ ಬೆಳವಣಿಗೆ ಕಾಣುತ್ತಿರುವ ಈ ಉದ್ಯಮ, ಮುಂದಿನ ವರ್ಷದ ವೇಳೆಗೆ 196 ಕೋಟಿ ಡಾಲರ್‌ನಷ್ಟು (ಸುಮಾರು 20 ಸಾವಿರ ಕೋಟಿ ರೂಪಾಯಿ) ವಹಿವಾಟು ನಡೆಸುವ ನಿರೀಕ್ಷೆ ಇದೆ ಎಂಬುದು ಮಾರುಕಟ್ಟೆಯ ಲೆಕ್ಕಾಚಾರ. ದೊಡ್ಡ ಪ್ರಮಾಣದಲ್ಲಿ ಮುಕ್ತ ಆನ್‌ಲೈನ್ ಕೋರ್ಸ್‌ಗಳ (MOOC) ಬಳಕೆಯ ವಿಷಯದಲ್ಲಿ ಭಾರತೀಯರು ಈಗ ಜಗತ್ತಿನಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ವಿಚಿತ್ರ ನೋಡಿ, ಕೆಲವು ವರ್ಷಗಳಿಂದ ಹೊಸ ಹೊಸ ತಂತ್ರಜ್ಞಾನಗಳ ಆವಿಷ್ಕಾರದ ಫಲವಾಗಿ ಆನ್‌ಲೈನ್ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗುತ್ತಿದ್ದರೂ ಅದಕ್ಕೆ ತಕ್ಕಂತೆ ಹೆಜ್ಜೆ ಹಾಕುವಲ್ಲಿ ಭಾರತ ಮಾತ್ರ ಹಿಂದೆ ಬೀಳುತ್ತಲೇ ಬಂದಿದೆ. ಮೈಕೊಡವಿ ಎದ್ದು ನಿಲ್ಲಬೇಕಿದ್ದ ಸಮಯದಲ್ಲಿ ಮಲಗಿ ನಿದ್ರಿಸಿದ ತಪ್ಪಿಗಾಗಿ ದೇಶದ ಪ್ರಮುಖ ವಿಶ್ವವಿದ್ಯಾಲಯಗಳು ಹಾಗೂ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಕೊರೊನಾ ಕಾಟದ ಈ ಸಮಯದಲ್ಲಿ ಸ್ವತಃ ಸಂಕಷ್ಟವನ್ನು ಎದುರಿಸಬೇಕಿದೆ. ಅದೇ ಬೇರೆ ದೇಶಗಳ ನೂರಾರು ವಿಶ್ವವಿದ್ಯಾಲಯಗಳು ಲಾಕ್‌ಡೌನ್‌ನ ಈ ಸಂದರ್ಭದಲ್ಲೂ ಸಹಜವಾಗಿಯೇ ಬೋಧನೆ ಮಾಡುತ್ತಿವೆ ಎನ್ನುತ್ತಾರೆ ಶಿಕ್ಷಣ ತಜ್ಞರು.

ದೇಶದಲ್ಲೀಗ 900 ವಿಶ್ವವಿದ್ಯಾಲಯಗಳಿದ್ದು, 3.5 ಕೋಟಿ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ. ಇನ್ನು ಹತ್ತು ವರ್ಷಗಳ ಅವಧಿಯಲ್ಲಿ ಉನ್ನತ ಅಧ್ಯಯನ ಮಾಡುವ





ದೇಶದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಮಧ್ಯೆ, ಬಡವ ಮತ್ತು ಶ್ರೀಮಂತರ ಮಧ್ಯೆ ಸೃಷ್ಟಿಯಾಗಿರುವ ಡಿಜಿಟಲ್ ಕಂದಕ, ಆನ್‌ಲೈನ್ ಶಿಕ್ಷಣವನ್ನು ಎಲ್ಲರ ಕೈಗೆಟಕಲು ಬಿಟ್ಟೀತೇ ಎಂಬ ಪ್ರಶ್ನೆ ಕಾಡುವಂತೆ ಮಾಡಿದೆ.